**<u>ಸಾಕ್ಷಿಯನ್ನು ದಿಃ 24.02.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಹೆಚ್ ಎಲ್ ಆರ್ ವಕೀಲರಿಂದಃ-</u>**

ವಾದಿ ಕರ್ನಾಟಕ ಬ್ಯಾಂಕ್ , ಚಿಕ್ಲುಂದ ಶಾಖೆಗೆ ಬಂದು ನಾನು 2 ವರ್ಷಗಳಾಗಿದೆ. 1 ನೇ ಪ್ರತಿವಾದಿಗೆ ಸಾಲ ಮಂಜೂರಾಗುವ ಸಮಯದಲ್ಲಿ ಸದರಿ ಶಾಖೆಯ ಮ್ಯಾನೇಜರ್ ನಾನು ಆಗಿರಲಿಲ್ಲ. 2014 ರಲ್ಲಿ 1 ನೇ ಪ್ರತಿವಾದಿಗೆ ಸಾಲ ಮಂಜೂರಾಗಿರುತ್ತದೆ. ಆದಾದ ನಂತರ ಲೋನ್ ಸ್ಯಾಕ್ಷನ್ ಮಾಡಿದ ಮ್ಯಾನೇಜರ್ ಸೇರಿ 3 ಜನ ಆಗಿರುತ್ತಾರೆ. ಮಂಜೂರಾದ ನಂತರ ಸಾಲ ವಸೂಲು ಮಾಡುವ ಪ್ರಯತ್ನ ಪಟ್ಟಿರುತ್ತಾರೆ. ಆ ಬಗ್ಗೆ ನೋಟೀಸು ಪ್ರತಿಗಳನ್ನು ಕೊಟ್ಟಿರುತ್ತೇವೆ.1 ನೇ ಪ್ರತಿವಾದಿಗೆ ಸಾಲ ಮಂಜೂರಾದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ಅವರಿಗೆ 3 ಬಗೆಯ ಸಾಲ ನೀಡಲಾಗಿದೆ. ಅವುಗಳೆಂದರೆ ಕ್ರಾಪ್ ಲೋನ್ , ಟ್ರಾಕ್ಟರ್ ಲೋನ್ , ಲ್ಯಾಂಡ್ ಡೆವಲಪ್ ಮೆಂಟ್ ಲೋನ್ ಆಗಿರುತ್ತದೆ. ಬೆಳೆ ಸಾಲವನ್ನು 2014 ರಲ್ಲಿ 3 ಲಕ್ಷ 50 ಸಾವಿರ ಆಗಿರುತ್ತದೆ. ಅದರಲ್ಲಿ ಎಷ್ಟು ಮರುಪಾವತಿ ಮಾಡಿದ್ದಾರೆ ಹಾಗೂ ಎಷ್ಟು ಬಾಕಿ ಎಂದು ಸ್ಟೇಟ್ ಮೆಂಟ್ ಕೊಟ್ಟಿದ್ದೇನೆ. ಅದೇ ರೀತಿ ಲ್ಯಾಂಡ್ ಡೆವಲಪ್ ಮೆಂಟ್ ಲೋನ್ ಎಷ್ಟು ಪಾವತಿ ಮಾಡಿದ್ದಾರೆ ಬಡ್ಡಿ ಎಷ್ಟು ಕಟ್ಟಿದ್ದಾರೆ ಎಂಬ ಬಗ್ಗೆ ಸ್ಟೇಂಟ್ ಮೆಂಟ್ ಕೊಟ್ಟಿದ್ದೇನೆ. ಅದೇ ರೀತಿ ಟ್ರಾಕ್ಟರ್ ಲೋನ್ ಎಷ್ಟು ಅಸಲು ಮತ್ತು ಬಡ್ಡಿ ಕಟ್ಟಿದ್ದಾರೆಂದು ಸ್ಟೇಂಟ್ ಮೆಂಟ್ ಇದೆ. ತಿಮ್ಮನಾಯಕ ಎಂಬುವವರು 1 ನೇ ಪ್ರತಿವಾದಿಯ ಗಂಡ.

ಟ್ರಾಕ್ಟರ್ ಲೋನ್ ಕೊಡುವಾಗ ಇನ್ಸೂಸೂರೆನ್ಸ್ ಮಾಡಿಸಲಾಗಿದೆ. ಅದರ ಪ್ರಕಾರ ಅಕಾಲೀಕ ಮರಣ ಹೊಂದಿದರೆ ಪೂರ್ತಿ ಹಣ ಮನ್ನಾಗುತ್ತದೆ ಎಂದು ಷರತ್ತಿದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು ಅವರ ಅವಿದ್ಯಾವಂತರಾದ ಕಾರಣ ಯಾವುದೇ ಸೌಲಭ್ಯವನ್ನು ನೀಡಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಜಮೀನಿನ ಆಧಾರದ ಮೇಲೆ ಸಾಲ ನೀಡಲಾಗಿದೆ. ಸರ್ವೆ ನಂ. ಮರೆತಿರುತ್ತೇನೆ. ಒಟ್ಟು 7 ಎಕರೆ 18 ಗುಂಟೆ ಕಣಗಾಲು ಮತ್ತು ಇನ್ನೊಂದು ಗ್ರಾಮದ ಸರ್ವೆ ನಂ. ಆಗಿರುತ್ತದೆ. ಸದರಿ ಜಮೀನುಗಳ ದಾಖಲೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿದ್ದವು. ಜಮೀನಿನ ದಾಖಲೆಗಳು 1 ನೇ ಪ್ರತಿವಾದಿ

ಹೆಸರಿನಲ್ಲಿದ್ದರೂ ಸಾಲವನ್ನು ಅವರ ಗಂಡನ ಹೆಸರಿನಲ್ಲಿ ಕೊಡಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ಜಂಟಿಯಾಗಿ ಸಾಲ ಕೊಡಲಾಗಿದೆ ಎಂದು ನುಡಿಯುತ್ತಾರೆ. ಜಮೀನಿನ ವ್ಯವಸಾಯವನ್ನು 1 ನೇ ಪ್ರತಿವಾದಿಯ ಗಂಡ ಮಾಡುತ್ತಿದ್ದ ಕಾರಣ ಸಾಲವನ್ನು ಜಂಟಿಯಾಗಿ ನೀಡಲಾಗಿದೆ. 1 ನೇ ಪ್ರತಿವಾದಿಯ ಗಂಡ ತಿಮ್ಮನಾಯಕರವರ ವಂಶವೃಕ್ಷ ಪಡೆದಿಲ್ಲ. 1 ನೇ ಪ್ರತಿವಾದಿ ಮತ್ತು ತಿಮ್ಮನಾಯಕರವರ ಮೊದಲನೇ ಮಗ ದಿನೇಶ್ ಎಂದಿದ್ದು ಸಾಲ ಕೊಡುವ ಸಮಯದಲ್ಲಿ 50 ವರ್ಷ ಇತ್ತು ಎಂದರೆ ಅವರ 2 ನೇ ಮಗ 48 ವರ್ಷ ಆಗಿತ್ತು ಎಂದರೆ ಇರಬಹುದು. 3 ನೇ ಮಗ ಹೆಚ್ ಎಂ ನಾಯಕ 46 ವರ್ಷ ಆಗಿತ್ತು ಎಂದರೆ ಇರಬಹುದು. ಅದೇ ರೀತಿ 4 ನೇ ಮಗಳು ಜ್ಯೋತಿ 42 ವರ್ಷ ಆಗಿತ್ತು ಎಂದರೆ ಇರಬಹುದು. ಅದೇ ರೀತಿ 5 ನೇ ಮಗಳು ಭಾಗ್ಯ 40 ವರ್ಷ ಆಗಿತ್ತು ಎಂದರೆ ಮಾಹಿತಿ ಇಲ್ಲ. 6 ನೇ ಮಗಳು ಬೇಬಿ 38 ವರ್ಷ ಆಗಿತ್ತು ಎಂದರೆ ಮಾಹಿತಿ ಇಲ್ಲ. 7 ನೇ ಮಗಳು ಸಾಕಮ್ಮ 32 ವರ್ಷ ಆಗಿತ್ತು ಎಂದರೆ ಇರಬಹುದು , ಮಾಹಿತಿ ಇಲ್ಲ.8 ನೇ ಮಗ ವೀರಾಜು 30 ವರ್ಷ ಆಗಿತ್ತು ಎಂದರೆ ಇರಬಹುದು, ಮಾಹಿತಿ ಇಲ್ಲ. 9 ನೇ ಮಗಳು ಶಿಲ್ಪ 25 ವರ್ಷ ಆಗಿತ್ತು ಎಂದರೆ ಇರಬಹುದು, ಮಾಹಿತಿ ಇಲ್ಲ. 10 ನೇ ಮಗ ಸುರೇಶ 20 ವರ್ಷ ಆಗಿತ್ತು ಎಂದರೆ ಇರಬಹುದು, ಮಾಹಿತಿ ಇಲ್ಲ. ಮೋಸ ಮಾಡುವ ಉದ್ದೇಶದಿಂದ 1 ನೇ ಪ್ರತಿವಾದಿಯ ಮಕ್ಕಳು ಪ್ರಾಪ್ತ ವಯಸ್ಕರಾಗಿದ್ದರೂ ಸಹ ಅವರ ವಂಶವೃಕ್ಷ ಪಡೆದುಕೊಳ್ಳದೇ ಮಾಹಿತಿಯನ್ನು ನೀಡದೇ ಸಾಲ ಮಂಜೂರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅಷ್ಟು ಜನ ಮಕ್ಕಳಿದ್ದರೂ ಸಹ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದರೂ ಅವರಿಗೆ ಮಾಹಿತಿ ನೀಡದೇ ಸಾಲ ಮಂಜೂರು ಮಾಡಿರುವುದು ಸರಿಯಲ್ಲ ಎಂದರೆ ಸುಳ್ಳು.

1 ನೇ ಪ್ರತಿವಾದಿ ಮತ್ತು ತಿಮ್ಮನಾಯಕರವರು ಅವಿದ್ಯಾವಂತರಾದ ಕಾರಣ ದಾಖಲೆಗಳಿಗೆ ಸಹಿ ಮಾಡಿಸಿಕೊಂಡು ನಮಗೆ ಬೇಕಾದ ರೀತಿ ಸೃಷ್ಟಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅದರಲ್ಲಿ ಅಸಲು ಹಣ ಮತ್ತು ಬಡ್ಡಿ ಹಣಗಳನ್ನು ಹೆಚ್ಚಾಗಿ ಬರೆದುಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನಿ ಪಿ–24 ಡೀಡ್ ಆಫ್ ಮಾರ್ಟ್ ಗೇಜ್ ನಲ್ಲಿ ಮಕ್ಕಳ ಸಹಿ ಪಡೆಯದೇ 1 ನೇ ಪ್ರತಿವಾದಿಯ ಸಹಿ ಪಡೆದುಕೊಳ್ಳಲಾಗಿದೆ ಎಂದರೆ ಸಾಕ್ಷಿ ಆರ್ ಟಿ ಸಿ ಯಲ್ಲಿ ಅವರ ಹೆಸರು ಮಾತ್ರ ಇದ್ದ ಕಾರಣ ಹಾಗೇ ಪಡೆಯಲಾಗಿದೆ ಎನ್ನುತ್ತಾರೆ. 1 ನೇ ಪ್ರತಿವಾದಿಗೆ ಸದರಿ ಆಸ್ತಿ

ಪಿತ್ರಾರ್ಜಿತ ಆಸ್ತಿ ಎಂದರೆ ಆ ಬಗ್ಗೆ ಎಲ್ಲೂ ನಮೂದು ಮಾಡಿಲ್ಲ ಎನ್ನುತ್ತಾರೆ. ದಾವಾ ಸ್ವತ್ತುಗಳು 1 ನೇ ಪ್ರತಿವಾದಿಗೆ ಹೇಗೆ ಬಂತು ಎಂಬ ಬಗ್ಗೆ ದಾಖಲೆ ಪಡೆದುಕೊಂಡಿಲ್ಲ. ಸದರಿ ಆಸ್ತಿಗಳು 1 ನೇ ಪ್ರತಿವಾದಿಗೆ ಹೇಗೆ ಬಂತು ಎಂದು ತಿಳಿದುಕೊಂಡಿದ್ದೀರಾ ಎಂದರೆ ಆರ್ ಟಿ ಸಿ ಯಲ್ಲಿ ಇದ್ದಂತೆ ಎಕ್ಸಿಕ್ಯೂಟ್ ಮಾಡಿರುತ್ತೇವೆ. ಆರ್ ಟಿ ಸಿ ಜೊತೆ ಆರ್ ಆರ್ ಕಾಪಿ, ಎಂ ಆರ್ ಪ್ರತಿ ಮತ್ತು ಮೂಲ ದಾಖಲೆಗಳನ್ನು ಪಡೆದುಕೊಂಡಿಲ್ಲ. ದಾವಾ ಆಸ್ತಿ 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳ ಪಿತ್ರಾರ್ಜಿತ ಆಸ್ತಿ ಆಗಿದ್ದು. ಸಾಲ ಕೊಡುವಂ ಸಂದರ್ಭದಲ್ಲಿ ಪ್ರಾಪ್ತ ವಯಸ್ಕರಾಗಿದ್ದರೂ ಅವರ ಒಪ್ಪಿಗೆ ಪಡದಿಲ್ಲ. ದಾವೆಯಲ್ಲಿಯೂ ಅವರನ್ನು ಪಾರ್ಟಿಯನ್ನಾಗಿ ಮಾಡಿಲ್ಲ ಆದ ಕಾರಣ ದಾವೆ ಊರ್ಜಿತ ಅಲ್ಲ ಎಂದರೆ ಸರಿಯಲ್ಲ. ನಾನು ಮ್ಯಾನೇಜರ್ ಆಗಿ ಬಂದ ನಂತರವೂ ಸ್ಟೇಂಟ್ ಮೆಂಟ್ ನ್ನು ನೀಡಿದ್ದು ಅದರ ಪ್ರಕಾರ 9 ವರೆ ಲಕ್ಷ ದಿಂದ 10 ವರೆ ಲಕ್ಷದವರೆಗೆ ಅಸಲು ಮತ್ತು ಬಡ್ಡಿ ಜಮೇಯಾಗಿದೆ ಎಂದರೆ ಸಾಕ್ಷಿ ನಿಖರವಾಗಿ ಹೇಳಲು ಆಗುವುದಿಲ್ಲ. ಅದರ ಸ್ಟೇಂಟ್ ಮೆಂಟ್ ನ್ನು ಹಾಜರುಪಡಿಸಿದ್ದೇನೆ. 1 ನೇ ಪ್ರತಿವಾದಿಗೆ ಸುಮಾರು 70-75 ವರ್ಷ ವಯಸ್ಸಾಗಿದೆ ಎಂದರೆ ಇರಬಹುದು. ಅವರಿಗೆ ಕಣ್ಣು ಕಾಣಿಸುವುದಿಲ್ಲ ದುಡಿಯಲು ಶಕ್ತಿ ಇಲ್ಲ ಎಂದರೆ ನಿಖರವಾಗಿ ಹೇಳಲು ಆಗುವುದಿಲ್ಲ.9 ವರೆ ಲಕ್ಷ ದಿಂದ 10 ವರೆ ಲಕ್ಷದವರೆಗೆ ಹಣ ಕಟ್ಟಿದ್ದರೂ ಸಹ ಬಡ್ಡಿಗೆ ಬಡ್ಡಿಗೆ ಸೇರಿಸಿ ಸುಳ್ಳು ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ. ಈಗಲೂ ಸಹ 1 ನೇ ಪ್ರತಿವಾದಿಯ ಹೆಸರಿನಲ್ಲಿ 1 ಲಕ್ಷದವರೆಗೆ ಹಣ ಇದೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ವಯಸ್ಸು ಆಗಿದ್ದು ಬಡ್ಡಿ ಅಸಲು ಕಡಿಮೆ ಮಾಡಿಕೊಟ್ಟರೆ ಈಗಲೂ ಸಹ ರಾಜೀ ಮಾಡಿಕೊಳ್ಳುತ್ತಾರೆ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಹೇಳಲು ನನಗೆ ಅಧಿಕಾರ ವ್ಯಾಪ್ತಿ ಇಲ್ಲವೆಂದು ಹೇಳುತ್ತಾರೆ.

**ಪಾಟೀ ಸವಾಲು 2 ನೇ ಪ್ರತಿವಾದಿ ಪರ ಶ್ರೀ ಟಿ ಎಂ ವಕೀಲರಿಂದಃ**

ಪ್ರತಿವಾದ ಪತ್ರ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.